ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಎ.ಬಿ.ಪಾಟೀಲ್ (ಸಾಕೇಶ್ವರ):- ಮಾನ್ಯ ಅಧ್ಯಕ್ಷರೆ, ಶ್ರೀ ಪಿ.ಸಿ.ಸಿದ್ಧನಗೌಡರ್ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು:- ಶ್ರೀ ಪಿ.ಸಿ.ಸಿದ್ಧನಗೌಡರ್‌ರವರು ಸೂಚಿಸಿರುವ ಹಾಗೂ ಶ್ರೀ ಎ.ಬಿ.ಪಾಟೀಲ್‌ವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

'' ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮಿನಿಯವರನ್ನು ಹತ್ತನೇ ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು. ''

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು
ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರನ್ನು
ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರು:- ಈಗ ಉಪಾಧ್ಯಕ್ಷರಿಗೆ ಅಭಿನಂದನೆಗಳನ್ನು ಸಲ್ಲಿಸುವುದು. ಮಾನ್ಯ ಸಭಾನಾಯಕರು.

ಶ್ರೀ ಜೆ.ಹೆಚ್.ಪಟೀಲ್ ಮುಖ್ಯಮಂತ್ರಿಗಳು:- ಮಾನ್ಯ ಅಧ್ಯಕ್ಷರೇ, ನಾವು ಬಹಳ ಪ್ರೀತಿಯಿಂದ ಕರೆಯತಕ್ಕಂಥ ಮಾಮನಿಯವರನ್ನು ಈ ಸದನದ ಉಪಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆರಿಸಿರುವುದು ಒಂದು ಹೆಮ್ಮೆಯ ವಿಷಯ. ಹಾಗೆಯೇ, ತಾವು ಈ ಸದನವನ್ನು ಯಾವ ರೀತಿ ನಡೆಸಿಕೊಂಡು ಬಂದಿದ್ದೀರಿ, ಎಲ್ಲಾ ಸಮಯದಲ್ಲೂ ದಕ್ಷತೆಯಿಂದ, ಕೆಲವು ಸಾರಿ ಹಾಸ್ಯದಿಂದ, ಕೆಲವು ಸಾರಿ ಕೋಪದಿಂದ, ಯಾವ ರೀತಿ ಈ ಸದನವನ್ನು ನಡೆಸಿಕೊಂಡು ಬಂದಿದ್ದೀರಿ, ಆ ಗುಣಗಳನ್ನು ಅವರೂ ಕಲಿತು ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

ಅಧ್ಯಕ್ಷರು:- ಈಗ ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು):- ಅಧ್ಯಕ್ಷರೇ, ವಿಧಾನ ಸಭೆಯ ಸನ್ಮಾನ್ಯ ಉಪಾಧ್ಯಕ್ಷರಾಗಿ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರು ಆಯ್ಕೆಯಾಗಿರುವಂಥಾದ್ದು ನಮಗೆಲ್ಲಾರಿಗೂ ತುಂಬಾ ಸಂತೋಷವಾಗಿದೆ. ಅವರು ಒಳ್ಳೆಯ ಒಂದು ಶುಭ ಘಳಿಗೆಯಲ್ಲಿ, ಶುಭ ಮುಹೂರ್ತದಲ್ಲಿ ಈ ಸ್ಥಾನವನ್ನು ಅಲಂಕರಿಸಿದ್ದಾರೆ ಎಂದು ನಾನಾದರೂ ಭಾವಿಸಿದ್ದೇನೆ. ಏಕೆಂದರೆ ಮೊನ್ನೆ ವಿಧಾನ ಮಂಡಲದ ಕಾರ್ಯಕಲಾಪಗಳು ಪ್ರಾರಂಭವಾದಾಗ ಅವತ್ತು ಸಮಯ ಸರಿಯಿರಲಿಲ್ಲ. ಹಾಗಾಗಿಯೇ ನಾವು ಇವರು, ಉಪಾಧ್ಯಕ್ಷರಾಗಿರುವಂಥವರು ಒಳ್ಳೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕು, ನಡೆಸಬೇಕು, ನಮಗೆಲ್ಲಾರಿಗೂ ಮಾರ್ಗದರ್ಶನ ಮಾಡಬೇಕು ಎಂದೇ ಇವತ್ತು ಒಳ್ಳೆಯ ದಿವಸ ಎಂದು ನಾವು ಕೇಳಿಕೊಂಡು ಬಂದು, ಇವತ್ತು ಅವರು ಆ ಸ್ಥಾನಕ್ಕೇರಬೇಕು ಎನ್ನುವ ದೃಷ್ಟಿಯಿಂದಾಗಿದೆ, ತುಂಬಾ ಸಂತೋಷ. ಬಹಳ ಪ್ರಖ್ಯಾತವಾದಂಥ, ಇಡೀ ರಾಜ್ಯದ ಜನರನ್ನು ಆಕರ್ಷಣೆ ಮಾಡುತ್ತಿರುವಂತ ಸವದತ್ತಿಯ ಯಲ್ಲಮ್ಮ ದೇವಸ್ಥಾನ, ಪವಿತ್ರವಾದಂಥ ಆ ಸ್ಥಳ ಯಾವುದಿದೆ, ಆ ಒಂದು ಕ್ಷೇತ್ರದಿಂದ ತಾವು ಬರುತ್ತಿದ್ದೀರಿ. ನಾನು ಅವರಿಗೆ ಶುಭ ಕೋರುತ್ತಿದ್ದೇನೆ. ನಾವು ಎಲ್ಲಾ ರೀತಿ ಸಹಕಾರ ಕೊಡುತ್ತೇವೆ. ಅಧ್ಯಕ್ಷರು ಯಾವ ರೀತಿ ನಮ್ಮ

ಕಡೆ ನೋಡುತ್ತಾರೋ, ಅದು ಈ ಕಡೆಯೇ ಹೆಚ್ಚು ಅವಕಾಶವನ್ನು ಕೊಟ್ಟು ನಮ್ಮ ಕಡೆ ನೋಡುತ್ತಾರೆಂದು ಅಂದುಕೊಂಡಿದ್ದೇನೆ. ಮುಖ್ಯ ಮಂತ್ರಿಗಳು ಒಂದು ಸತ್ಸಂಪ್ರದಾಯ ಪಾಲನೆ ಮಾಡುತ್ತಾರೆ ಎಂದು ಅಂದುಕೊಂಡಿದ್ದೆ. ಸಂದರ್ಭ ಅಲ್ಲದಿದ್ದರೂ ಸಹ ನಾವಂತೂ ಇವರನ್ನು ಕೂರಿಸಿದ್ದೇವೆ; ಸ್ವಾಗತ ಮಾಡಿದ್ದೇವೆ. ಸರ್ವಾನುಮತದಿಂದ ಸಹಕಾರ ಕೊಟ್ಟಿದ್ದೇವೆ. ಹಿಂದೆ ಲೋಕಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ಹೇಗೆ ವಿರೋಧ ಪಕ್ಷಗಳಿಗೆ ಅವಕಾಶ ಕೊಟ್ಟಿದ್ದೀರಿ ಅದೇ ರೀತಿ ನೀವು ಅವಕಾಶ ಮಾಡಿಕೊಡುತ್ತೀರಿ ಎಂದು ನಾವು ಅಂದುಕೊಂಡಿದ್ದೆವು. ಆದರೆ ಆ ಧಾರಾಳತನ ನಿಮ್ಮಲ್ಲಿ ಬರಲಿಲ್ಲ. ಆದರೂ ಸಹ ನಾವಂತೂ ಸರ್ವಾನುಮತದಿಂದ ಅವರನ್ನು ಇಲ್ಲಿ ಕೂರಿಸಿದ್ದೇವೆ. ವಾತಾವರಣ ಏನು ಎಂಬುದು ನಮಗೆ ಗೊತ್ತಿತ್ತು, ಬೇರೆಯವರನ್ನು ಮುಂದೆ ತಂದು ನಾವು ಇಲ್ಲಿ ನಿಲ್ಲಿಸಿದ್ದರೆ ವ್ಯತ್ಯಾಸ ಆಗುತ್ತಿತ್ತು ಎಂದು ನಮಗೆ ಗೊತ್ತಿದ್ದರೂ ಸಹ ಇದು ಸರ್ವಾನುಮದಿಂದ ಆಗಬೇಕು, ನಮ್ಮ ಪಕ್ಕದಲ್ಲಿ ಕುಳಿತುಕೊಳ್ಳುವವರು ಸರ್ವಾನುಮತದಿಂದ ಆಯ್ಕೆಯಾಗಿ ಬರಲಿ ಎಂದು ಎಲ್ಲಾ ರೀತಿಯ ಸಹಕಾರ ಕೊಟ್ಟಿದ್ದೇವೆ. ಮತ್ತು ಆ ಒಂದು ಸ್ಥಾನದಲ್ಲಿದ್ದು ಅವರಿಗೆ ಒಳ್ಳೆಯದಾಗಲಿ, ಆ ಖುರ್ಚಿಯಲ್ಲಿ ಕುಳಿತುಕೊಂಡವರು ಒಳ್ಳೆಯ ಸತ್ಸಂಪ್ರದಾಯ ಮಾಡಿಕೊಂಡು ಬಂದರೋ ಅದನ್ನು ಇವರೂ ಪಾಲಿಸಿಕೊಂಡು ಬರಲಿ ಅದೇ ರೀತಿ ಎರಡೂ ಕಡೆ ಈ ಸದನದ ಕಾರ್ಯಕಲಾಪಗಳು ಒಳ್ಳೆಯ ರೀತಿಯಿಂದ ನಡೆಯುವುದಕ್ಕೆ ಸಂಪೂರ್ಣ ಸಹಕಾರವನ್ನು ನಾವು ಕೊಡುತ್ತೇವೆ. ಅದೇ ರೀತಿ ಅವರೂ ನಮಗೆ ಸಹಕರಿಸಲಿ ಎಂದು ಹೇಳಿ ಭಗವಂತ ಅವರಿಗೆ ಇನ್ನೂ ಹೆಚ್ಚಿನ ಸ್ಥಾನಮಾನಗಳನ್ನು ಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ಅವರು ಮಂತ್ರಿಗಳು ಆಗುತ್ತಾರೆಂದು ತಿಳಿದುಕೊಂಡಿದ್ದೆವು. ಈ ಸ್ಥಾನ ಏನೂ ಕಡಿಮೆಯಲ್ಲ. ಮುಂದೆಯ್ಲೂ ಇನ್ನೂ ಒಳ್ಳೊಳ್ಳೆಯ ಸ್ಥಾನಗಳು ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿ ಅವರಿಗೆ ಶುಭ ಕೋರಿ, ನನಗೆ ನಾಲ್ಕು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಸವದತ್ತಿಯ ಮತಕ್ಷೇತ್ರದ ಶಾಸಕರಾದ ಶ್ರೀಮಾನ್ ಚಂದ್ರಶೇಖರ ಮಾಮನಿಯವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬಹುಶಃ ಸರ್ವಾನುಮದಿಂದ ನಾವು ಇವತ್ತು ಅದನ್ನು ಒಪ್ಪಿಕೊಂಡಿದ್ದೇವೆ. ಅದರ ಅರ್ಥ ಏನೆಂದರೆ ಆ ಕಡೆಯೂ ಬೇಕು, ಈ ಕಡೆಯೂ ಬೇಕು ಒಂದು. ಎಲ್ಲರಿಗೂ ಸರಿಸಮಾನವಾಗಿ ನೋಡಿಕೊಳ್ಳತಕ್ಕಂಥ ದೃಷ್ಟಿ ಅವರಲ್ಲಿದೆ ಎಂದು ಹೇಳಿಕೆ ಇವತ್ತು ನಾವು ಒಮ್ಮತದಿಂದ ಒಪ್ಪಿಕೊಂಡು ಆ ಸ್ಥಾನಕ್ಕೆ ಅವರನ್ನು ಕೂರಿಸಿದ್ದೇವೆ. ಅದಕ್ಕಾಗಿ ನಾನು ಅವರನ್ನು ಕಳಕಳಿಯಿಂದ ಕೇಳಿಕೊಳ್ಳತಕ್ಕಂಥಾದ್ದು ಇಷ್ಟೇ. ಎಂಥದೇ ಸಂದರ್ಭ ಬಂದರೂ ಕೂಡ ತಾವು ನಿಷ್ಪಕ್ಷಪಾತವಾಗಿ ಮತ್ತು ಜ್ಯುಡಿಷಿಯಸ್ ಆಗಿ ನೋಡಿಕೊಂಡು ಹೋಗುತ್ತೀರಿ ಎನ್ನತಕ್ಕಂಥ ಆತ್ಮವಿಶ್ವಾಸ ನನಗಿದೆ. ಅದೇ ಸಂದರ್ಭದಲ್ಲಿ, ಈಗ ಮಾನ್ಯ ಯಡಿಯೂರಪ್ಪನವರು ಹೇಳಿದರು, ಮಂತ್ರಿಗಳಾಗಬೇಕಾಗಿತ್ತು, ಆದರೆ ಉಪಾಧ್ಯಾಕ್ಷರಾದರು ಎಂದು. ಇದು ಮೊದಲನೇ ಸ್ಥಾನ. ಏಕೆಂದರೆ ಎಂ.ಎಸ್.ಪಾಟೀಲರು ಅಲ್ಲೇ ಕುಳಿತಿದ್ದರು, ಈಗ ಕ್ಯಾಬಿನೆಟ್ ಮಿನಿಸ್ಟರ್ ಆಗಿ ಹೋದರು. ಆದ್ದರಿಂದ ಹೇಳಲಿಕ್ಕಾಗುವುದಿಲ್ಲ, ಮುಂದೆ ರೀಷಫಲ್ ಯಾವಾಗ ಮಾಡುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು:- ನಿಮಗೆ ಗೊತ್ತಿಲ್ಲದೇ ಹೇಗೆ ಮಾಡುತ್ತಾರೆ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಮಗೆ ಗೊತ್ತಿಲ್ಲದೇ ಹೇಗೆ ಮಾಡುತ್ತಾರೆ ಎಂದರೆ, ಕೆಲವು ಸಲ ಏನಾಗುತ್ತದೆಂದರೆ ನಿಮ್ಮನ್ನುಕೇಳಿ ಮಾಡುತ್ತಾರೆ. ಆಗ ನಮ್ಮನ್ನು ಕೇಳುವುದಿಲ್ಲ. ಅದಕ್ಕಾಗಿ ನಮ್ಮನ್ನು ಕೇಳಿ ಮಾಡಿದ್ದರೆ ಗೊತ್ತಾಗುತ್ತದೆ. ಅದಕ್ಕೆ, ಯಾವಾಗ ಮಂತ್ರಿಯಾಗುತ್ತಾರೆ.ಎನ್ನತಕ್ಕಂಥಾದ್ದನ್ನು ಹೇಳಲಿಕ್ಕೆ ಬರುವುದಿಲ್ಲ. ಅವರ ಮೇಲೆ ಅದು ಡಿಪೆಂಡ್ ಆಗಿದೆ. ಮಾಡುವುದೂ, ಬಿಡುವುದೂ ಅವರಿಗೆ ಬಿಟ್ಟಿದ್ದುದು. ಆದರೆ ಆ ಸ್ಥಾನಕ್ಕೆ ಬಂದವರೆಲ್ಲಾ ಅನೇಕ ಜನ ಮಂತ್ರಿಗಳಾಗಿದ್ದಾರೆ. ಮಂತ್ರಿಗಳಿಗಿಂತಲೂ ಇವತ್ತು ಹೆಚ್ಚಿನ ಸ್ಥಾನ ಎಂದರೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನ ನಮ್ಮ ಇಡೀ ಸದನ ಗೌರವ ಕೊಡತಕ್ಕಂಥಾದ್ದು ಯಾರಿಗೆ ಎಂದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ನಾವು ಅನೇಕ ಸಾರಿ ಮಂತ್ರಿಗಳ ಜೊತೆ ಜಗಳ ಆಡುತ್ತೇವೆ. ತಾವು ಸ್ವಲ್ಪ ಹೆದರಿಸಿದರೆ, ಬೆದರಿಸಿದರೆ ನಾವು ಕುಳಿತುಬಿಡುತ್ತೇವೆ. ಅಷ್ಟೊಂದು ಯಜಮಾನಗಿರಿ ಅಂದರೆ ಈ ಸದನದ ಯಜಮಾನಗಿರಿ ಯಾರ-ಹತ್ತಿರ ಇದೆ ಎಂದರೆ ತಮ್ಮ ಹತ್ತಿರ ಮತ್ತು ಅವರ ಹತ್ತಿರ ಇದೆ. ಅದಕ್ಕಾಗಿ ಅವರು ಎಲ್ಲರನ್ನೂ ನಿಷ್ಪಕ್ಷಪಾತವಾಗಿ ನೋಡಿಕೊಂಡು ಹೋಗುತ್ತಾರೆ. ಎನ್ನತಕ್ಕಂಥ ನಂಬಿಕೆಯನ್ನು ಇಟ್ಟುಕೊಂಡು, ಮುಂದಿನ ನಮ್ಮ ಕಾರ್ಯಕ್ರಮಗಳಿಗೂ ಕೂಡ ಅವರು ಬಹಳ ಸುಗಮವಾಗಿ ಸಹಾಯ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಈಗಾಗಲೇ ನಾವು ಧರಣಿ ಮಾಡುತ್ತಿದ್ದೇವೆ. ತಾವು ಹೇಳಿದ ಮೇಲೆ ನಾವು ಇಲ್ಲಿ ಬಂದು ಅವರ ಚುನಾವಣೆಗೆ ಸಹಕಾರವನ್ನು ಕೊಟ್ಟಿದ್ದೇವೆ. ಮುಂದೆ ನಾವು ನಡೆಸತಕ್ಕಂಥ ಧರಣಿಗೂ ಕೂಡ ಅವರು ಸಹಕಾರ ಕೊಡುತ್ತಾರೆ ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು.ಆರ್.ಸಭಾಪತಿ(ಉಡುಪಿ):- ಸನ್ಮಾನ್ಯ ಸಭಾಧ್ಯಕ್ಷರೇ, ಪ್ರಜಾಪ್ರಭುತ್ವದ ಸತ್ಸಂಪ್ರದಾಯದಂತೆ ಇವತ್ತು ಮಾನ್ಯ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರು ಈ ಸದನದ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಗೊಂಡಿದ್ದಾರೆ. ಅತ್ಯಂತ ಕ್ಲಿಷ್ಟಕರ ಸಮಯದಲ್ಲೂ ಕೂಡ ತಾವು ಯಾವ ರೀತಿಯಲ್ಲಿ ಈ ಸದನವನ್ನು ನಡೆಸಿಕೊಂಡು ಹೋಗಿದ್ದೀರೋ, ಅದೇ ಮಾರ್ಗದರ್ಶನದಲ್ಲಿ ಅವರೂ ಕೂಡ ನಮ್ಮನ್ನು ನಡೆಸಿಕೊಂಡು ಹೋಗುತ್ತಾರೆ ಎನ್ನುವಂಥ ಭರವಸೆಯೊಂದಿಗೆ ಅವರು ಇವತ್ತು ಆಯ್ಕೆಯಾದ ಈ ಸಂದರ್ಭದಲ್ಲಿ ನಾನು ಅವರಿಗೆ ಶುಭ ಅಭಿನಂದನೆಯನ್ನು ಕೋರಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

★ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಚಂದ್ರಶೇಖರ ಮಾಮನಿಯವರನ್ನು ಉಪಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರತಕ್ಕಂಥಾದ್ದು ನಮ್ಮೆಲ್ಲರಿಗೂ ಅತ್ಯಂತ ಸಂತೋಷವಾಗಿದೆ. ಅವರು ಬಹಳ ಒಳ್ಳೆಯ ಸಜ್ಜನಿಕೆ ಮತ್ತು ಸರಳ ಸ್ವಭಾವದ ವ್ಯಕ್ತಿತ್ವವುಳ್ಳಂಥವರು. ತಾವು ಅಧ್ಯಕ್ಷರಾಗಿ ಈ ಒಂದು ಶಾಸನಸಭೆಯ ಘನತೆಯನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದೀರಿ. ಇಷ್ಟೊಂದು ಪ್ರಮಾಣದಲ್ಲಿ ವಿರೋಧ ಪಕ್ಷದ ಸದಸ್ಯರಿರುವಾಗ ಶಾಸನಸಭೆ ಸಾಮಾನ್ಯವಾಗಿ ತಿಳಿ ವಾತಾವರಣದಲ್ಲಿ ನಡೆಯತಕ್ಕಂಥಾದ್ದು ಅಧ್ಯಕ್ಷರ ಒಂದು ಜಾಣ್ಮೆ ಮತ್ತು ಅವರ ತಿಳುವಳಿಕೆಯ ಮೇಲೆ ಹೋಗುತ್ತದೆ. ಆ ದೃಷ್ಟಿಯಿಂದ ತಾವು ಈ ಸದನವನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದೀರಿ. ಅದೇ ರೀತಿ ಚಂದ್ರಶೇಖರ ಮಾಮನಿಯವರು ನಮ್ಮ ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದಾರೆ, ತಾವು ಈ ಸಾಲಿನಲ್ಲಿ

ಕುಳಿತುಕೊಳ್ಳದಿದ್ದರೂ ನಮ್ಮೆಲ್ಲರಿಗೂ ಹೆಚ್ಚಿನ ಅವಕಾಶವನ್ನು ಕೊಟ್ಟಿದೀರಿ ಎಂದು ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಕಡೆ ಕುಳಿತಿರುವುದರಿಂದ ಇವರು ಸ್ವಲ್ಪ ಜಾಸ್ತಿ ಇನ್ನೂ ಹೆಚ್ಚಿನ ಅವಕಾಶವನ್ನು ಕೊಡುತ್ತಾರೆ ಎಂದು ನಾವು ನಿರೀಕ್ಷಣೆ ಮಾಡಿದ್ದೇವೆ. ಏಕೆಂದರೆ ಈಗ ನೀವು ಪತೀತವಾಗಿದ್ದೀರಿ ಆದರೆ ಅವರು ನಮ್ಮ ಕಡೆ ಕುಳಿತಿರುವುದರಿಂದ ನಮ್ಮ ಪರ ಆಗಲೇಬೇಕು ಎಂದು ತಿಳಿದುಕೊಂಡಿದ್ದೇವೆ. ಒಂದೊಂದು ಸಾರಿ ತಾವು ಮುನಿಸಿಕೊಳ್ಳುತ್ತೀರಿ, ಅದು ಆಗಬಾರದು ಎಂದು ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದೇ ಸಂದರ್ಭದಲ್ಲಿ ಹೊಸದಾಗಿ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ಜೆ.ಹೆಚ್.ಪಟೇಲ್‌ರವರನ್ನೂ ಸಹ ನಾನು ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ. ಹೊಸದಾಗಿ ಮುಖ್ಯಮಂತ್ರಿಗಳಾಗಿದ್ದಾರೆ. ಇಲ್ಲಿ ಉಪ ಮುಖ್ಯಮಂತ್ರಿಗಳಾಗಿ ಅಪಾರವಾದಂಥ ಕೆಲಸವನ್ನು ಮಾಡಿರತಕ್ಕಂಥವರು ಮತ್ತು ಅನೇಕ ವಿಚಾರಗಳನ್ನು ಅರಿತಿರತಕ್ಕಂಥವರು, ಅವರು ಮುಖ್ಯಮಂತ್ರಿ ನಮ್ಮಲ್ಲರಿಗೂ ಬಹಳ ಸಂತೋಷ ಎನ್ನತಕ್ಕಂಥವರು, ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಉಪ ಮುಖ್ಯಮಂತ್ರಿಯಾದದಕ್ಕೂ ನಾನು ಅಭಿನಂದನೆ ಸಲ್ಲಿಸುತ್ತೇನೆ, ಇದರ ಜೊತೆಗೆ, ವಾದ ವಿವಾದ ಏನೇ ಇರಲಿ, ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಂಥವರು ಒಬ್ಬರು ಈ ದೇಶದ ಪ್ರಧಾನಿಯಾಗಿದ್ದಾರೆ. ನಾವು ಈ ಸದನದಲ್ಲಿ ಒಂದು ಸರ್ವಾನುಮತದ ನಿರ್ಣಯವನ್ನು ತಂದು, ಅಭಿನಂದನೆ ಸಲ್ಲಿಸತಕ್ಕ ಒಂದು ನಿರ್ಣಯವನ್ನು ಇಲ್ಲಿ ಮಂಡಿಸಬೇಕು ಅನ್ನತಕ್ಕಂಥಾದ್ದು ನನ್ನ ಸಲಹೆ. ತಾವು ಅವಕಾಶ ಕೊಟ್ಟರೆ ನಾನು ನಾಳೆಯೋ ಅಥವಾ ಯಾವತ್ತಾದರೂ ಮಂಡಿಸುತ್ತೇನೆ. ಇಲ್ಲವೆಂದರೆ ತಾವು ಸರ್ಕಾರದ ಪರವಾಗಿ ಮಂಡಿಸಿದರೂ ಸರ್ವಾನುಮದಿಂದ ನಾವು ಅದನ್ನು ಒಪ್ಪುತ್ತೇವೆ. ಏಕೆಂದರೆ ವಾದ ವಿವಾದೆ ಬೇರೆ, ರಾಜಕೀಯ ವಿಚಾರ ಬೇರೆ, ಅನೇಕ ವಿಚಾರಗಳಲ್ಲಿ ಜಿಜ್ಞಾಸೆಗಳಿರಬಹುದು, ಅನೇಕ ವಿಚಾಗಳಲ್ಲಿ ಪರ ವಿರೋಧವಿರಬಹುದು, ಆದರೆ ಈ ರಾಜ್ಯದ ಒಬ್ಬ, ಕರ್ನಾಟಕದ ಒಬ್ಬ ಕನ್ನಡಿಗರು ಇತಿಹಾಸದಲ್ಲಿ ಪ್ರಧಾನ ಮಂತ್ರಿ ಆಗಿರತಕ್ಕಂಥಾದ್ದು, ಹೆಮ್ಮೆ ಪಡತಕ್ಕಂಥಾದ್ದು, ಆದ್ದರಿಂದ ಈಗಾಗಲೇ ನಾವು ನಿರ್ಣಯವನ್ನು ಮಂಡಿಸಬೇಕಾಗಿತ್ತು. ನಿರ್ಣಯವನ್ನು ಮಂಡಿಸಿ, ಏನಿದ್ದರೂ ನಮ್ಮ ಎಲ್ಲಾ ಮನಸ್ತಾಪಗಳನ್ನು ಮರೆತು. ಒಮ್ಮತದ ನಿರ್ಣಯವನ್ನು ಮಾಡತಕ್ಕಂಥದ್ದು ಒಂದು. ಮತ್ತು ಅವರು ಪ್ರಧಾನ ಮಂತ್ರಿಯಾಗಿ ಕರ್ನಾಟಕಕ್ಕೆ ಬಂದಾಗ ನಮ್ಮನ್ನೆಲ್ಲಾ ಕರೆಯುತ್ತಾರೆಂದು ನಾವು ಅಂದುಕೊಂಡಿದ್ದೆವು. ಊಟಕ್ಕೆ ಕರೆಯುತ್ತಾರೆ ಎಂದು ಸುದ್ದಿ ಕೂಡ ಬಂತು. ಆದರೆ ಕೇವಲ ಜನತಾದಳದವರನ್ನೇ ಊಟಕ್ಕೆ ಕರೆದುಬಿಟ್ಟರು. ನಮ್ಮನ್ನೆಲ್ಲಾ ಪ್ರಧಾನಮಂತ್ರಿಯವರ ಊಟಕ್ಕೆಂದು ಹೇಳಿ ಕರೆದಿದ್ದರೆ ನಾವು ಊಟಕ್ಕೆ ಬರಬಹುದಾಗಿತ್ತು. ನಾವೆಲ್ಲರೂ ಬಹಳ ಆತುರದಲ್ಲಿ ಕಾತುರದಲ್ಲಿ ಕಾದಿದ್ದೆವು. ಆದರಲ್ಲಿಯೂ ಪತ್ರಿಕೆಗಳಲ್ಲಿ ಕುರಿಗಳ ಫೋಟೋ ನೋಡಿ ಬಹಳ ಜನರಿಗೆ ನಾಲಿಗೆಯಲ್ಲಿ ನೀರು ಬಂತು.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):- ಕೆಲವರಿಗೆ ಬೇರೆ ಕೆಲಸ ಮಾಡುವುದೂ ಏನೂ ಇರುವುದಿಲ್ಲ. ಇಂತಹದ್ದನ್ನು ಮಾಡುವುದು ಅದೇ ಅವರಿಗೆ ಕೆಲಸ.

ಶ್ರೀ ವಾಟಾಳ್ ನಾಗರಾಜ್:- ಆದ್ದರಿಂದ ನನಗನ್ನಿಸಿತು ಅದೇನೆಂದರೆ ನಮ್ಮನ್ನು ಕರೆದು ಎಲ್ಲಾ ವಿರೋಧ ಪಕ್ಷದವರನ್ನು ಕರೆದು, ಆದರಲ್ಲಿ ನನಗೆ ಪಕ್ಷ ಭೇದ ಇಲ್ಲ, ನಾನು ಪ್ರಧಾನ ಮಂತ್ರಿ ಆದಮೇಲೆ ನಿಮ್ಮ ಎಲ್ಲರೂ ಮುಖಂಡರನ್ನು ಕರೆದಿದ್ದೇವೆ. ಎಂದು ಹೇಳಿ ಅವರು

ಕರೆಯಬೇಕಾಗಿತ್ತು. ಕೊನೆಗೆ ವೈ.ಕೆ.ರಾಮಯ್ಯನವರನ್ನು, ಪುಟ್ಟಸ್ವಾಮಿಗೌಡರನ್ನು ನನ್ನ ಪ್ರಕಾರ ಕರೆಯಬಹುದಾಗಿತ್ತು. ಆ ಮಟ್ಟಕ್ಕೆ ಆ ಎತ್ತರಕ್ಕೆ ಹೋಗಿರುವಾಗ ಅದೆಲ್ಲವನ್ನು ಬಿಟ್ಟು ಒಂದು ಹೊಸ ತಿಳಿ ವಾತಾವರಣದಲ್ಲಿ ಅದನ್ನು ಮಾಡಬೇಕಾಗಿತ್ತು. ಎನ್ನತಕ್ಕಂಥದ್ದು ನನ್ನ ಅಭಿಲಾಷೆ. ಇವತ್ತಿನ ದಿವಸ ಅವರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಆ ಒಂದು ನಿರ್ಣಯವನ್ನು ಮಂಡಿಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಾ ಉಪಾಧ್ಯಕ್ಷರ ಆಯ್ಕೆಯನ್ನು ಅಭಿನಂದಿಸುತ್ತೇನೆ. ಇನ್ನು ಒಂದು ಕಥೆ ಹೇಳಿ ಎಂದು ಯಾರೋ ಹೇಳಿದರು. ಕಥೆ ಏನಾಗಿದೆಯೆಂದು ಹೇಳಿದರೆ ಒಂದು ಸ್ನೇಹ ಜೀವಿ ಎನ್ನತಕ್ಕಂಥದ್ದು ಅದು ಗಂಡಸು ಆದರೂ ಆಗಿರಬಹುದು ಅಥವಾ ಹೆಂಗಸು ಆದರೂ ಆಗಿರಬಹುದು. ಅದಕ್ಕೆ ಲಿಂಗಭೇದ ಇಲ್ಲ. ಅದಕ್ಕೆ ಅಂತಿಮವಾಗಿ ಯಾರಿಗೆ ಎನ್ನತಕ್ಕಂಥದ್ದು ಅಲ್ಲಿ ನಿರ್ಧಾರ ಮಾಡಬಾರದು. ಅದಕ್ಕೆ ಪ್ರಶ್ನೆ ಗುರುತು ಹಾಕಿ ಬಿಟ್ಟುಬಿಡೋಣ. ಇದಕ್ಕೆ ಬಹಳ ಆಶ್ಚರ್ಯ ಪಡಬಹುದು. ನನ್ನನ್ನು ಮತ್ತು ನಮ್ಮ ಶ್ರೀಮಾನ್ ನಂಜೇಗೌಡರನ್ನು ಒಬ್ಬ ಹೆಣ್ಣುಮಗಳು ಪ್ರೀತಿಸುತ್ತಾ ಬಂದಳು. . . .

ಶ್ರೀ ಹೆಚ್.ಎನ್.ನಂಜೇಗೌಡ:- ತಂಗಿಗೆ ಎಷ್ಟೋ ಜನ ಅಣ್ಣಂದಿರು ಬೇಕಾದರೂ ಇರಬಹುದಲ್ಲ.

ಶ್ರೀ ವಾಟಾಳ್ ನಾಗರಾಜ್:- ಆ ಪ್ರೀತಿ ವಿಶ್ವಾಸ ಎಲ್ಲಿಯವರೆಗೆ ಇತ್ತು ಎಂದರೆ. . .

ಅಧ್ಯಕ್ಷರು:- ಈಗ ನಾನು ಏನು ಹೇಳುತ್ತೇನೆಂದರೆ ನೀವು ಹೊರಗಡೆ ಮಾಡುವುದು ಏನು ಬೇಕಾದರೂ ಮಾಡಿಕೊಳ್ಳಿ. ಇವತ್ತು ಒಂದು ದಿವಸಕ್ಕೋಸ್ಕರ ಕಥೆ ಓದುವುದಕ್ಕೋಸ್ಕರವಾಗಿಯಾದರೂ ಬೈರೇಗೌಡರು ಹೆಸರು ತೆಗೆದುಕೊಳ್ಳಲಿ. ಅದಕ್ಕೆ ಅವರು ಬೇಸರ ಪಟ್ಟುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಆ ಪ್ರೀತಿ ಮಾಡಿದ ಹೆಣ್ಣು ಮಗಳು ಯಾರು ಎಂದು ಅವರಿಗೆ ಎಂದರೆ ಬೈರೇಗೌಡರಿಗೂ ಗೊತ್ತು. ಅಂತಿಮವಾಗಿ ಸಿದ್ಧರಾಮಯ್ಯನವರಿಗೂ ಗೊತ್ತು. ಅವರೆಲ್ಲರಿಗೂ ಸ್ವಲ್ಪ ಆಶ್ಚರ್ಯವಾಗುತ್ತಾ ಇದೆ. ಆ ಮೇಲೆ ಅದನ್ನೆಲ್ಲಾ ನೋಡಿದಾಗ, ಎಷ್ಟು ಪ್ರೀತಿ ಅಂದರೆ ನನ್ನ ತಂದೆ ತಾಯಿ ವಿರೋಧ ಮಾಡಿದರೂ ಚಿಂತೆ ಇಲ್ಲ ಆದರೆ ನಿಮ್ಮ ಜೊತೆಯಲ್ಲಿ ಅಷ್ಟು ಪ್ರೀತಿ ವಿಶ್ವಾಸದಿಂದ ಇದ್ದೇನೆ ಎಂದು ಹೇಳಿ ನಮಗೆ ಮಾತು ಕೊಟ್ಟರು. ಸಂದರ್ಭ ಬಂದಾಗ ದಿವಸವಾದ ನಂತರ ಆ ಪ್ರೀತಿ ನನ್ನ ಮೇಲೆ ಹೊರಟು ಹೋಯಿತು. ಏಕೆ ಆ ಪ್ರೀತಿ ಹೊರಟುಹೋಯಿತು ಎಂದು ನನಗೆ ಅರ್ಥವಾಗಲಿಲ್ಲ. ಸರಿ ನಂತರ ನಂಜೇಗೌಡರ ಹತ್ತಿರ ಪ್ರೀತಿ ಮಾಡುವುದಕ್ಕೆ ಪ್ರಾರಂಭವಾಯಿತು. ನಾನೂ ನೋಡಿದೆ, ಇವತ್ತು ಆಗಬಹುದು, ನಾಳೆ ಆಗಬಹುದೆಂದು ಹೇಳಿ ಆದರೆ ಅದು ನೋಡಿದರೆ ಇವತ್ತಿನವರೆಗೂ ಈಗ ಸ್ವಲ್ಪ ಪ್ರಾರಂಭವಾಗಿದೆ., ಪ್ರೀತಿ ಏಕೆ ಹೋಯಿತು ಕಾರಣ ಏನು ಎನ್ನತಕ್ಕಂಥ ಪ್ರಶ್ನೆ. . . .

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ಪ್ರಶ್ನೆ ತಮ್ಮ ಮೇಲೆ ಕಾಣಿಸುತ್ತಾ ಇದೆ. ಅದಕ್ಕೆ ಬೇಗನೆ ಸರಿಪಡಿಸಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಆದ್ದರಿಂದ ಈ ಪ್ರಶ್ನೆ ಮತ್ತೊಮ್ಮೆ ಯಾರು ಮಾಡಿದ್ದು, ಸಾಮಾನ್ಯವಾಗಿ ಆ ಹೆಣ್ಣುಮಗಳ ಬಗ್ಗೆ ಆ ಸ್ನೇಹ ಜೀವಿ ಬಗ್ಗೆ ಅಪಾರ ಗೌರವ. ಗೌರವ ಎಂದರೆ

ಒಳ್ಳೆಯ ಅಭಿಮಾನ, ಎಂದೆಂದೂ ಒಳ್ಳೆಯ ಆದರ್ಶ ಒಂದು ಮಾತು ಕೊಟ್ಟಮೇಲೆ ಅದು ಮಾತು. ಪ್ರೀತಿ ವಿಶ್ವಾಸದಲ್ಲಿ ಅಷ್ಟೊಂದು ಪ್ರಾವಿತ್ರತೆ , ಅನೇಕ ಸಾರಿ ಸದನದಲ್ಲಿ ನಾನು ಅಧಿಕಾರಿ ಬಿಟ್ಟರೂ ಚಿಂತೆ ಇಲ್ಲ ಆದರೆ ನಾನು ನಿಮ್ಮನ್ನು ಬಿಡುವುದಿಲ್ಲ ಎನ್ನತಕ್ಕಂಥ ಮಾತನ್ನು ಮಾತನಾಡಿದ್ದೂ ಉಂಟು. ಇದನ್ನೆಲ್ಲಾ ನೋಡಿದಾಗ ಈ ಪ್ರೀತಿ ಎನ್ನುವಂಥದ್ದು ಸ್ವಲ್ಪ ಮಾಯವಾಗಿ ಹೋಯಿತೇ ಎಂದು ಹೇಳಿ ಅಷ್ಟಕ್ಕೆ ನಿಲ್ಲಿಸಿ ಪ್ರಶ್ನೆ ಹಾಕಿ ಬಿಟ್ಟುಬಿಡುತ್ತೇನೆ. ಯಾರು ಎಂದು ಮುಂದಕ್ಕೆ ತೀರ್ಮಾನವಾಗಲಿ ಎಂದು ಮಾನ್ಯ ಅಧ್ಯಕ್ಷರಿಗೆ ಆ ಮಾತನ್ನು ಹೇಳಿ ಅದು ಹೆಂಗಸು ಆದರೂ ಆಗಿರಬಹುದು ಅಥವಾ ಗಂಡಸು ಆದರೂ ಆಗಿರಬಹುದು ಅಥವಾ ತಾವು ಆದರೂ ಆಗಿರಬಹುದು.

ಶ್ರೀ ಬಿ.ಎ.ಶ್ರೀರಾಮರೆಡ್ಡಿ(ಬಾಗೇಪಲ್ಲಿ):- ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಸರ್ವಾನುಮತದಿಂದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರತಕ್ಕಂಥ ಸನ್ಮಾನ್ಯ ಶ್ರೀ ಚಂದ್ರಶೇಖರ ಮಾಮನಿಯವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಸಹಕಾರ ಕ್ಷೇತ್ರದಲ್ಲಿ ಬಹಳ ನುರಿತಂಥ ಒಬ್ಬ ವ್ಯಕ್ತಿ. ಆ ಸಹಕಾರ ತತ್ವ ಲ್ಲಿ ಗೊತ್ತಿದೆ. ಅದೇ ರೀತಿಯಲ್ಲಿ ಇವತ್ತು ಸದನದಲ್ಲಿ ಕೂಡ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳು ಹೆಚ್ಚು ಕಡಿಮೆ ಸಮ ಬಲ ದಲ್ಲಿರತಕ್ಕಂಥ ಸಂದರ್ಭದಲ್ಲಿ ಆ ಸಹಕಾರ ತತ್ವದಲ್ಲಿ ನಡೆದಿರತಕ್ಕಂಥ ಅನುಭವದ ಆಧಾರದ ಮೇಲೆ ಅವರು ಈ ಸದನವನ್ನು ಬಹಳ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು ಮತ್ತು ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳಿಗೆ ಇರತಕ್ಕಂಥ ಸ್ಥಾನವನ್ನು ಗುರುತಿಸಿ ಸರಿಯಾದ ರೀತಿ ಈ ಸದನವನ್ನು ನಡೆಸಿ ಸದನಕ್ಕೆ ಗೌರವವನ್ನು ತರತಕ್ಕಂಥ ರೀತಿಯಲ್ಲಿ ಮತ್ತು ಈ ಸದನದ ಅತ್ಯಂತ ಎತ್ತರದ ಸ್ಥಾನವನ್ನು ಉಳಿಸುವುದರಲ್ಲಿ ಪ್ರಮುಖವಾಗಿ ಅವರು ಪಾತ್ರವಹಿಸಬೇಕೆಂದು ಹೇಳಿ ನಾನು ಅವರಲ್ಲಿ ವಿನಂತಿಸುತ್ತಾ ಮತ್ತೊಮ್ಮೆ ಅವರು ಸರ್ವಾನುಮತದಿಂದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಸನ್ಮಾನ್ಯ ಸಭಾಧ್ಯಕ್ಷರೆ, ಚಂದ್ರಶೇಖರ ಮಾಮನಿಯವರು ಸರ್ವಾನುಮತದಿಂದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಬಹಳ ಕಷ್ಟಕರವಾದ ಕೆಲಸ, ಕ್ಲಿಷ್ಟಕರವಾದುದು ಎಂದರೆ ಅಧ್ಯಕ್ಷ ಸ್ಥಾನ ಎಂದು ನಾನು ಹೊಸ ಸದಸ್ಯನಾಗಿ ಹೇಳುತ್ತಿದ್ದೇನೆ. ನಾನು ನೋಡಿದ ಹಾಗೆ ಈ ರಾಜ್ಯದಲ್ಲಿ ಇಬ್ಬರಿಗೆ ಬಹಳ ಕಷ್ಟ. ಅದು ಯಾವುದು ಎಂದರೆ ಶಿಕ್ಷಣ ಸಂಸ್ಥೆಯಲ್ಲಿ ಅಂಗನವಾಡಿ ಮೇಡಂನವರನ್ನು ನೋಡಿದ್ದೇನೆ. ಅಂಗನವಾಡಿ ಮೇಡಂ ಪೂರ್ತಿಯಾಗಿ, ಅಂದರೆ ಕಾಲ ಮುಕ್ತಾಯವಾಗುವರೆಗೆ ನಿರ್ವಹಣೆ ಮಾಡುವುದು, ಇನ್ನೊಂದು ಈ ಸದನದಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡುವುದು ಎರಡೂ ಬಹಳ ಜವಾಬ್ದಾರಿಯುತವಾದ ಕೆಲಸ. ಆದ್ದರಿಂದ ತಾವು ತಮ್ಮ ನೇತೃತ್ವದಲ್ಲಿ ಆ ಕೆಲಸವನ್ನು ಅತ್ಯಂತ ಪವಿತ್ರವಾಗಿ ನಿರ್ವಹಣೆ ಮಾಡಿದ್ದೀರಿ. ಅಷ್ಟೇ ಪವಿತ್ರವಾಗಿ ನಿರ್ವಹಣೆ ಮಾಡತಕ್ಕಂಥ ಜವಾಬ್ದಾರಿ ಹೊತ್ತಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ರಾಜೇಂದ್ರನ್ (ಕೆ.ಜಿ.ಎಫ್.):- ಮಾನ್ಯ ಸಭಾಧ್ಯಕ್ಷರೆ, I am very thankful to you for having given me this opportunity to speak. I am very glad that our respectful Mr.Chandrashekhar

Mamani is elected unanimously as Deputy Speaker. ನಮಗೆಲ್ಲ ಬಹಳ ಸಂತೋಷ. ನಮ್ಮಂಥ ವಯಸ್ಸಿನವರಿಂದ ಅವರಿಗೆ ಆಶೀರ್ವಾದ ಮಾಡುವುದಕ್ಕಾಗುವುದಿಲ್ಲ. ಆದರೆ ನಮ್ಮ ಪ್ರೀತಿ ಅವರ ಮೇಲೆ ಯಾವಾಗಲೂ ಇರುತ್ತದೆ.

But we have a Himalaya Speaker in this House and we like our Deputy Speaker should also be like that, to blance this House. We must have disipline in this House and we are having it, and it should continue for ever. and we shoudl maintain peace in this House. It looks like a scale. ಉಪಾಧ್ಯಕ್ಷರು ನಮ್ಮ ಕಡೆ ಬಂದಿದ್ದಾರೆ. ನಮಗೆ ಸಹಾಯ ಮಾಡುತ್ತಾ ಇದ್ದಾರೆಂದು ನೋಡಿದರೆ ಒಂದು ಕಡೆ ಮೆಜಾರಿಟಿ ಇದೆ, ಇನ್ನೊಂದು ಕಡೆ ಸ್ವಲ್ಪ ಮೆಜಾರಿಟಿ ಇದೆ ಎಲ್ಲಾ ಸೇರಿಸಿ ಬಾಲೈನ್ಸ್ ಮಾಡಬೇಕು ಡೆಪ್ಯುಟಿ ಸ್ಪೀಕರ್. Therefore it will be a blanced one and not an imbalanced one. Our respectful Speaker is like a rock and hope our Deputy Speaker will also follow him and do justice in maintaining peace. I pray God to give him good health, continuous strength and stamina to maintain the dignity of this House. With these words, I thank the chair for giving me an opportunity to speak and conclude.

SRI NARAYANA RAO THARALE(BELGAUM):-

Mr.Speaker: Sir, a great honour has been done to the people of Bombay-Karnataka area by unanimously electing Shri Chandrashekhar Mamani as Deputy Speaker of this August House. He is know as a Cooperative worker and he has served in Bombay-Karnataka area. He is a Member of this House and he belongs to my home district. On behalf of MES Group, I heartily congratulate him on his election as deputy Speaker of this House. I thank you for having given me this opportunity to speaker the felicitation of the Deputy Speaker.

ಶ್ರೀ ಸಯ್ಯರ್ ಜುಲ್ಫಿಕರ್ ಹಶ್‌ಮಿ (ಬೀದರ್ ಕ್ಷೇತ್ರ):- ಮಾನ್ಯ ಅಧ್ಯಕ್ಷರೆ,

(ಮಾನ್ಯ ಸದಸ್ಯರು ಹಿಂದಿಯಲ್ಲಿಮಾತನಾಡಿದರು)

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರನ್ನು ಈ ಸದನ ಅವರನ್ನು ಉಪಾಧ್ಯಕ್ಷರನ್ನಾಗಿ

ಸರ್ವಾನುಮತದಿಂದ ಆಯ್ಕೆ ಮಾಡಿದೆ. ಇದಕ್ಕಾಗಿ ನಾನು ವಿರೋಧ ಪಕ್ಷಗಳ ಸದಸ್ಯರಿಗೆ ಅಭಿನಂದನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರು ಈ ಸದನಕ್ಕೆ ಎರಡನೇ ಬಾರಿ ಶಾಸಕರಾಗಿ ಆಯ್ಕೆಯಾಗಿ ಬಂದಿರುತ್ತಾರೆ. ಅವರಿಗೆ ಈ ಸದನದ ಕಾರ್ಯಕಲಾಪಗಳು ಹಾಗೂ ನಡವಳಿಕೆಗಳ ಬಗ್ಗೆ ಸಂಪೂರ್ಣವಾದಂಥ ಅನುಭವವಿದೆ. ಇದರ ಹಿನ್ನಲೆಯಲ್ಲಿ ಈ ಸದನದ ಗೌರವ, ಪರಂಪರೆ, ಸತ್ಸಂಪ್ರದಾಯಗಳನ್ನು ಎತ್ತಿ ಹಿಡಿಯುವುದರಲ್ಲಿ ಅವರು ಸಮರ್ಥರಾಗಿದ್ದಾರೆ. ಆ ದಿಕ್ಕಿನಲ್ಲಿ ಯಶಸ್ಸು ದೊರಕಲಿ ಎಂದು ಹೇಳಿ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಮಿತ್ರರಾಗಿರತಕ್ಕಂಥ ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರನ್ನು ಇಡೀ ಸದನ ಸರ್ವಸಮ್ಮತದಿಂದ ಉಪಾಧ್ಯಕ್ಷರ ಸ್ಥಾನಕ್ಕೆ ಆಯ್ಕೆ ಮಾಡಿರತಕ್ಕಂಥದ್ದು ಮತ್ತು ಅವರ ಅನುಭವ ಏನಿದೆ ಈ ಅನುಭವ ಈ ಸದನದ ಘನತೆಯನ್ನು ಇನ್ನೂ ಹೆಚ್ಚು ಎತ್ತರಕ್ಕೆ ತರುವಲ್ಲಿ ಪರಿಣಾಮಕಾರಿಯಾಗಿ ಮಾಡುತ್ತಾರೆಂದು ಹೇಳುತ್ತಿರತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಕೇಳಿ, ಈ ಸದನದ ಎಲ್ಲಾ ಸದಸ್ಯರು ಈ ಸದನದಲ್ಲಿ ಕಾರ್ಯಕಲಾಪವನ್ನು ನಡೆಸುವಲ್ಲಿ ಅವರಿಗೆ ನಮ್ಮ ಹೃದಯವನ್ನು ತುಂಬಿದೆ ಬೆಂಬಲವನ್ನು, ಸಹಕಾರವನ್ನು ಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಿ ಮಾನ್ಯ ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರಿಗೆ ಪಕ್ಷತೀತವಾಗಿ ಆ ಕೆಲಸವನ್ನು ನಿರ್ವಹಿಸುವಂತ ಶಕ್ತಿಯನ್ನು ಆ ಭಗವಂತ ಪಾಲಿಸಿಕೊಡಲಿ ಎಂದು ಈ ಸಂದರ್ಭದಲ್ಲಿ ಹೇಳಿ ತಮಗೆ ನಾನು ಶುಭಾಶಯವನ್ನು ಕೋರುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ):- ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ಫೋನ್ ಮಾಡಿದ್ದೆ ಅದು ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರಿಗೆ ಆ ಕರೆ ಹೋಯಿತು. ಅಧ್ಯಕ್ಷರು ಇದ್ದಾರೆಯೇ ಎಂದು ಕೇಳಿದೆ, ಅವರು ನಾನು ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರು ಮಾತನಾಡುತ್ತಿರುವುದು ಎಂದು ಹೇಳಿದರು. ಆದರೆ ಅವರ ಡೆಪ್ಯೂಟಿ ಸಿಪೀಕರ್ ಎಂದು ಹೇಳಿಕೊಳ್ಳಲಿಲ್ಲ. ನೋಡಿ ಇದು ಹೇಗೆ ಎಂದು. ಮೊದಲು ಡೆಪ್ಯೂಟಿ ಸ್ಪೀಕರ್ ಆಗಿದ್ದವರು ಡಿಮೋಷನ್ ಆಯಿತು ಎಂದು ನಾನು ಕರೆಯುವುದು. ಡೆಪ್ಯೂಟಿ ಸ್ಪೀಕರ್ ಆಗಿದ್ದವರು ಮಂತ್ರಿಯಾದರೆ ನನ್ನ ದೃಷ್ಟಿಯಲ್ಲಿ ಗೌರವ ದೃಷ್ಟಿಯಿಂದ ಪ್ರೋಟಕಾಲ್ ದೃಷ್ಟಿಯಿಂದ ಎಲ್ಲಾ ದೃಷ್ಟಿಯಿಂದಲೂ ಡಿಮೋಷನ್ ಆದರೆಂದು. ಆದುದರಿಂದ ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರಿಗೆ ಪ್ರಮೋಷನ್ ಆಗಲಿ ಎಂಬುದು ನಾನು ಅಪೇಕ್ಷೆಪಡುವುದಿಲ್ಲ. ಏಕೆಂದರೆ ಪ್ರಮೋಷನ್ ಅಂದರೆ ಅವರು ಸ್ಪೀಕರ್ ಆಗಬೇಕಾಗುತ್ತದೆ. ನಿಮ್ಮ ಸ್ಥಾನಪಲ್ಲಟ ಆಗುತ್ತದೆ. ಡೆಪ್ಯೂಟಿ ಸ್ಪೀಕರ್‌ಗೆ ಮಂತ್ರಿಯಾಗಿ ಹೋದರೆ ನಾನು ಪ್ರಮೋಷನ್ ಎಂದು ತಿಳಿದುಕೊಳ್ಳುವುದೇ ಇಲ್ಲ. ಆದುದರಿಂದ ಮಂತ್ರಿಯಾದರೆ ಡಿಮೋಷನ್ ಆಗುತ್ತದೆ. ಡಿಮೋಷನ್ ಸಹ ಆಗ್ಬುವುದು ಅವರಿಗೆ ಬೇಡ ಎಂದು ನನ್ನ ಅಭಿಪ್ರಾಯ. ಅವರು ತಮ್ಮ ಕರ್ತವ್ಯದಲ್ಲಿ ಯಶಸ್ವಿಯನ್ನು ಗಳಿಸಲಿ ಎಂದು ಹೇಳಿ ನಾನು ಹಾರೈಸಿ ನಮ್ಮೆಲ್ಲರ ಸಹಕಾರ ಅವರಿಗೆ ಇದೆ ಎಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ಎಸ್. ಕೌಜಲಗಿ (ಅರಭಾವಿ):- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ಶುಭ

ವೇಳೆಯಲ್ಲಿ ಶ್ರೀ ಸಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರನ್ನು ಬಹುಮತದಿಂದ ಸರ್ವಾನುಮತದಿಂದ ಉಪಾಧ್ಯಕ್ಷರನ್ನಾಗಿ ಮಾಡಿರುವುದು ನನಗೆ ಹೆಮ್ಮೆ ಎಂದು ಅನ್ನಿಸುತ್ತದೆ. ವಿಧಾನ ಮಂಡಲದ ಕಾರ್ಯಕಲಾಪಗಳಲ್ಲಿ ಬೆಳಗಾಂ ಜಿಲ್ಲೆಯ ಒಬ್ಬ ಪ್ರತಿನಿಧಿಯನ್ನು ಇಟ್ಟುಕೊಂಡೇ ಬಂದಿದೆ. ಹಿಂದೆ ಶ್ರೀ ಎ.ಆರ್. ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದೆ ಇವತ್ತು ಉಪಾಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದರು, ಕೋಳೆಯವರು ಕೆಲಸ ಮಾಡಿದ್ದರು ತದನಂತರ ನಾನು ಅಧ್ಯಕ್ಷನಾಗಿ ಕೆಲಸ ಮಾಡಿದ್ದೆ. ಇವತ್ತು ಉಪಾಧ್ಯಕ್ಷರಾಗಿ ಶ್ರೀ ಚಂದ್ರಶೇಖರ ಮಾಮನಿಯವರು ಆಯ್ಕೆಯಾಗಿದ್ದಾರೆ. ಅವರು ಈ ಸದನದ ಗಂಭೀರತೆ, ಘನತೆ ಗೌರವವನ್ನು ಕಾಪಾಡಿಕೊಂಡು ಹೋಗುವುದರಲ್ಲಿ ಹಿಂದೆ ಬೀಳುವುದಿಲ್ಲವೆಂದು ನನಗೆ ಒಂದು ವಿಶ್ವಾಸ ಇದೆ. ಏಕೆಂದರೆ ಚುನಾಯಿತರಾಗಿ ಬಂದಂತಹ ಕ್ಷೇತ್ರ ಏನಿದೆ ಅವರು ಜನರ ಮನಸ್ಸನ್ನು ಅರಿತುಕೊಂಡು ಅವರ ಬೇಡಿಕೆಗಳನ್ನು ಈಡೇರಿಸಿಕೊಂಡು ಸಫಲವಾಗಿ ಬಂದಿದ್ದಾರೆ. ಅದರಂತೆ ವಿಧಾನ ಸಭೆಯ ಕಾರ್ಯಕಲಾಪಗಳನ್ನು ನಿಷ್ಪಾಕ್ಷಪಾತವಾಗಿ ನಡೆಸಿಕೊಂಡು ಹೋಗುತ್ತಾರೆಂದು ನನಗೆ ಎಂದು ಅನಿಸಿಕೆ ಇದೆ. ದೇವರು ಅವರಿಗೆ ಅಂತಹ ಶಕ್ತಿಯನ್ನು ಕೊಡಲಿ ಎಂದು ಹಾರೈಸುತ್ತೇನೆ.

ಶ್ರೀ ಕೆ.ಎನ್.ಈಶ್ವರಪ್ಪ(ಶಿವಮೊಗ್ಗ):- ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಗೌರವವನ್ನು ಎತ್ತಿ ಹಿಡಿಯುವುದಕ್ಕೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಪ್ರಯತ್ನವನ್ನು ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಅದಕ್ಕೆ ಮುಕುಟ ಪ್ರಾಯವಾಗಿ ರೂಪಿಸುವಂತ ರೂಪದಲ್ಲಿ ಅಧ್ಯಕ್ಷ ಸ್ಥಾನ ತಂಬಾ ಮಹತ್ವಪೂರ್ಣವಾದಂತಹ ಸ್ಥಾನ ಅಂತಹ ಒಂದು ಸ್ಥಾನದ ಉಪಾಧ್ಯಕ್ಷ ಸ್ಥಾನ; ಅಂತಹ ಸ್ಥಾನಕ್ಕೆ ಇವತ್ತು ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರು ಸರ್ವಾನುಮತದಿಂದ ಆಯೆಕಯಾಗಿರುವುದು ನಿಜಕ್ಕೂ ಕೂಡ ಇಡೀ ಸದನದ ಮತ್ತು ಇಡೀ ರಾಜ್ಯದ ಜನತೆಗೆ ತುಂಬಾ ಸಂತೋಷವನ್ನು ಉಂಟು ಮಾಡಿದೆ. ಇಡೀ ಸದನದ ಎಲ್ಲಾ ಶಾಸಕರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಆ ಸ್ಥಾನದಲ್ಲಿ ಅವರು ಯಶಸ್ವಿಯಾಗಲಿ ಎಂದು ನಾನು ಹಾರೈಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಸನ್ಮಾನ್ಯ ಅಧ್ಯಕ್ಷರೆ, ಈಗ ಸಭೆಯು ಸರ್ವಾನುಮತದಿಂದ ತೀರ್ಮಾನವನ್ನು ತೆಗೆದುಕೊಂಡು ಚಂದ್ರಶೇಖರ ಮಾಮನಿಯವರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆರಿಸಲಾಗಿದೆ. ಅದಕ್ಕೆ ಸಹಕಾರ ಮಾಡಿದಂಥ ಎಲ್ಲರನ್ನೂ ಕೂಡ ನಾವು ಅಭಿನಂದಿಸಬೇಕಾಗಿದೆ. ನನಗನ್ನಿಸುತ್ತದೆ, ಬಹುಶಃ ಹಿಂದೆ ಇದ್ದಂತಹ ವಾಣಿಜ್ಯ ಮತ್ತು ಕೈಗಾರಿಕೆ ಸಮಿತಿಯ ಸದಸ್ಯನಾಗಿಯೂ ಸಹ ನಾನು ಇದ್ದೆ ಆಗ ಅವರು ಅಧ್ಯಕ್ಷರಾಗಿಯೂ ಕೂಡ ಇದ್ದರು. ಆಗ ಅವರು ತೆಗೆದುಕೊಳ್ಳುತ್ತಿದ್ದ ತೀರ್ಮಾನ ಅವರು ಎಲ್ಲಾ ಸದಸ್ಯರ ಜೊತೆ ಮಿಲನ ಆಗತಕ್ಕಂಥದ್ದು ಇವುಗಳೆಲ್ಲವನ್ನೂ ನೋಡಿದಾಗ ನನಗನ್ನಿಸುತ್ತದೆ ಬಹುಶಃ ಉಪಾಧ್ಯಕ್ಷರಾಗಿ ಹೆಚ್ಚಿನ ರೀತಿಯಲ್ಲಿ ತಾವುಗಳು ಯಾವ ರೀತಿಯಲ್ಲಿ ಸುವ್ಯವಸ್ಥಿತವಾಗಿ ಸದನವನ್ನು ನಡೆಸಿಕೊಂಡು ಹೋಗುತ್ತೀರಿ ಎಂದು ನಾನು ಭಾವಿಸಿದ್ದೇನೆ. ನಾನೂ ಕೂಡ ಎಲ್ಲಾ ರೀತಿಯಾದಂಥಹ ಸಹಕಾರವನ್ನು ಅವರಿಗೆ ಕೊಡುತ್ತೇನೆ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಅಭಿನಂದನೆಯನ್ನು ಅವರಿಗೆ ಸಲ್ಲಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೆ, ನಮ್ಮ

ಚಂದ್ರಶೇಖರ ಮಾಮನಿಯವರು ಈ ಸದನದ ಉಪಾಧ್ಯಕ್ಷರಾಗಿರುವುದು ನಮ್ಮೆಲ್ಲರಿಗೂ ಸಂತೋಷವನ್ನುಂಟು ಮಾಡಿದೆ. ಕಾರಣ, ಒಬ್ಬ ರೈತ ಮುಖಂಡರು, ಹಳ್ಳಿಗಾಡಿನ ವಿಚಾರಗಳನ್ನು ಸಾಕಷ್ಟು ತಿಳಿದವರಾಗಿ, ಸದನದಲ್ಲಿ ಸದಸ್ಯರಾಗಿ ಕೆಲಸ ಮಾಡಿ ಇವ್ವೊತ್ತು ಆ ಸ್ಥಾನದಲ್ಲಿ ಕುಳಿತಾಗ ಇಡೀ ರೈತವರ್ಗಕ್ಕೆ ಸಹಾಯ ಮಾಡುವುದಕ್ಕೆ ಅವರಿಗೆ ಅವಕಾಶ ಇದೆ ಎಂಬ ಮಾತನ್ನು ಹೇಳಿ ಅವರಿಗೆ ಶುಭವನ್ನು ಕೋರುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್(ಕಲಘಟಗಿ):- ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರಶೇಖರ್ ಮಾಮನಿಯವರನ್ನು ಈ ಸದನದ ಉಪಾಧ್ಯಕ್ಷರನ್ನಾಗಿ, ಈ ಸದನದ ಎಲ್ಲಾ ಸದಸ್ಯರು ಸರ್ವಾನುಮತದಿಂದ ಆಯ್ಕೆ ಮಾಡಿದ್ದಕ್ಕೆ ನಾನು ಪ್ರಥಮವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎರಡನೆಯದಾಗಿ, ಶ್ರೀಮಾನ್ ಚಂದ್ರಶೇಖರ್ ಮಾಮನಿಯವರು ಈ ವಿಧಾನಸಭೆಗೆ ಎರಡು ಬಾರಿ ಚುನಾಯಿತರಾಗಿ ಬಂದಿದ್ದಾರೆ; ಅದರ ಜೊತೆಗೆ ಸವದತ್ತಿ ಕ್ಷೇತ್ರದಲ್ಲಿ ಎಲ್ಲಮ್ಮಗುಡ್ಡ ಟ್ರಸ್ಟಿನಲ್ಲಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಾಕಷ್ಟು ಸೇವೆಯನ್ನು ಸಲ್ಲಿಸಿದ್ದಾರೆ. ಅದರ ಜೊತೆಗೆ ಸಾಕಷ್ಟು ಸಹಕಾರ ಸಂಘಗಳಲ್ಲಿ ಸೇವೆಯನ್ನು ಸಲ್ಲಿಸಿರುವ ಶ್ರೀ ಮಾಮನಿಯವರು ಈ ಸದನದ ಉಪಾಧ್ಯಕ್ಷರಾಗಿರುವುದು ಬಹಳ ಸಂತೋಷದ ಸಂಗತಿ. ನಮ್ಮ ಜಿಲ್ಲೆಯವರೇ ಆದ ಶ್ರೀ ಯಾವಗಲ್ ಅವರು ಹಿಂದೆ ಉಪಾಧ್ಯಕ್ಷರಾಗಿದ್ದಾಗ ಆಗ ಅಧ್ಯಕ್ಷರಾದ್ದಂಥ ಬಣಕಾರ್ ಅವರು ಹೆಚ್ಚು ಅವಕಾಶವನ್ನು ಕೊಟ್ಟಿದ್ದು ಇಲ್ಲ. ತಾವು ಹೆಚ್ಚಿನ ರೀತಿಯಲ್ಲಿ ಅವಕಾಶಗಳನ್ನು ಉಪಾಧ್ಯಕ್ಷರಿಗೆ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಂಡು ಅವರ ಕರ್ತವ್ಯ ಎಲ್ಲರಿಗೆ ಸಹಾಯವಾಗಲಿ ಎಂಬ ಮಾತನ್ನು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಪ್ರಮಿಳಾ ನೇಸ್ಗರ್ಗಿ (ಚಾಮರಾಜಪೇಟೆ):- ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಇಲ್ಲಿಗೆ ಬಂದತಕ್ಷಣವೇ ನೋಡಿದರೆ, ಇಲ್ಲಿ ಒಬ್ಬ ಮಹಿಳಾ ಶಾಸಕಿ- ಯಾರೂ ಕಾಣಲಿಲ್ಲ. ಕಾರಣ ಏನೆಂದು ನನಗೆ ನಗನೇ ಅಂದುಕೊಂಡೆ. ಈ ಮಂತ್ರಿಮಂಡಲದಲ್ಲಿ ಸಂಪುಟ ದರ್ಜೆಯ ಮಂತ್ರಿ ಪದವಿಯನ್ನು ಯಾವ ಮಹಿಳೆಗೂ ಕೊಟ್ಟಿಲ್ಲ. ಉಪಾಧ್ಯಕ್ಷರ ಹುದ್ದೆಯನ್ನಾದರೂ ಕೊಡುತ್ತಾರೇನೋ ಎಂದರೆ ಅದನ್ನೂ ಕೊಡಲಿಲ್ಲ. ಆದ್ದರಿಂದ ಈ ಸಮಾಧಾನದಿಂದ ಯಾವ ಮಹಿಳಾ ಶಾಸಕರೂ ಬಂದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಈಗಾಗಲಾದರೂ ಈ ತಪ್ಪನ್ನು ಸರಿಪಡಿಸುತ್ತಾರೆಂದು ನಾನು ಮಾನ್ಯಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ. 45 ಜಂಬೋ ಮಂತ್ರಿಮಂಡಲದಲ್ಲಿ ಕೆಲವರನ್ನು ಕಡಿಮೆ ಫಾಡಿ ಮಹಿಳೆಯರನ್ನು ಮಂತ್ರಿಗಳನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಾ ಮಾನ್ಯ ಚಂದ್ರಶೇಖರ ಮಾಮನಿಯವರನ್ನು ಈ ಸದನದ ಉಪಾಧ್ಯಕ್ಷ ಸ್ಥಾನಕ್ಕೆ ಚುನಾಯಿಸಿರತಕ್ಕದ್ದು ನಿಜವಾಗಿಯೂ ಬಹಳ ಸಂತೋಷದಾಯಕ ವಿಚಾರ. ಅವರ ಹೆಸರು ಮಾಮನಿ ಎಂದು ಬಸವಣ್ಣನವರ ಕಾಲದಲ್ಲಿ ಎಂದು ಮಹಾ ಮನೆ ಇತ್ತು. ಆ ಮಹಾ ಮನೆಯಲ್ಲಿ ಎಲ್ಲರಿಗೂ ಅವಕಾಶ ಇರುತ್ತಿತ್ತು. ಎಲ್ಲಾ ಜಾತಿ, ಕೋಮಿನವರೂ ಅಲ್ಲಿಗೆ ಬಂದು ವ್ಯಾಸಂಗ ಮಾಡಿ ಉನ್ನತ ಶಕ್ತಿಪಡೆಯುವಂಥ ಒಂದು ಮಹಾ ಮನೆ ಆಗಿತ್ತು. ಅಂಥಹ ಮುಂಬಯಿ ಕರ್ನಾಟಕದಿಂದ ಬಂದಿರತಕ್ಕ ಈ ಮಾಮನಿಯವರು ಈ ಮಹಾ ಮನೆಯನ್ನು ಈ ಆಲಯವನ್ನು ಮಹಾ ಮನೆಯನ್ನಾಗಿ ಪರಿವರ್ತನೆ ಮಾಡಿ ಅಂಥಹ ಕೆಲಸವನ್ನು ಮಾಡುತ್ತಾರೆಂಬ ನಂಬಿಕೆ ನನಗಿದೆ. ಆ ಕೆಲಸವನ್ನು ಮಾಡುವಂಥ ಶಕ್ತಿಯನ್ನು

ದೇವರುಕೊಡಲೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ನಾನೂ ಒಂದೆರಡು ನಿಮಿಷ ಮಾತನಾಡುತ್ತೇನೆ. ಸದನದ ಎರಡೂ ಕಡೆಯ ನಾಯಕರು, ಪತ್ರಿ ಪಕ್ಷದ ನಾಯಕರಾಧಿಯಾಗಿ ಎಲ್ಲಾ ಸದಸ್ಯರೂ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದ್ದೀರಿ. ಸಭಾಧ್ಯಕ್ಷನಾನಗಿ ನಾನೂ ಕೂಡ ತಮ್ಮೊಡನೆ ಸೇರಿ ಮಾನ್ಯ ಚಂದ್ರಶೇಖರ ಮಾಮನಿಯವರನ್ನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ಇದುವರೆಗೂ ನನ್ನ ಜೊತೆಯಲ್ಲಿ ಉಪಾಧ್ಯಕ್ಷರಾಗಿ ಕೆಲಸಮಾಡಿದಂಥ ಶ್ರೀ ಎನ್.ಎಸ್.ಪಾಟೀಲರನ್ನೂ ನಾನು ನೆನಪುಮಾಡಿಕೊಳ್ಳುತ್ತೇನೆ. ಅವರು ಅತ್ಯಂತ ಉಪಯುಕ್ತ ರೀತಿಯಲ್ಲಿ ಸೌಹಾರ್ದಯುತ ಮನೋಭಾವದಿಂದ ನನ್ನೊಡನೆ ಸಹಕರಿಸಿದ್ದಾರೆ. ಜವಾಬ್ದಾರಿಯ ದೃಷ್ಟಿಯಿಂದ ನೋಡಿದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಲ್ಲಿ ಹೆಚ್ಚು ವ್ಯತ್ಯಾಸವೇನೂ ಇರುವುದಿಲ್ಲ. ನಾವು ಅಣ್ಣತಮ್ಮಂದಿರಂತೆ ಕೆಲಸಮಾಡಿಕೊಂಡು ಹೋಗುತ್ತಿದ್ದೆವು. ಯಾವುದೇ ಸಂದರ್ಭದಲ್ಲೂ, ಯಾವುದೇ ವಿಚಾರದಲ್ಲೂ ನಮ್ಮಿಬ್ಬರ ಮಧ್ಯೆ ಯವುದೇ ಭಿನ್ನಾಭಿಪ್ರಾಯಗಳೂ ಬರುತ್ತಿರಲಿಲ್ಲ. ಪ್ರತಿದಿನವೂ ಈ ಸದನ ಸಮಾವೇಶಗೊಳ್ಳುವ ಮುನ್ನ ಮಾನ್ಯ ಉಪಾಧ್ಯಕ್ಷರು ನನ್ನ ಜೊತೆ ಚರ್ಚೆಮಾಡುತ್ತಿದ್ದರು. ಬಹುಶಃ ಈ ಸದನದೊಳಕ್ಕೆ ಬರುವುದೂ ಮತ್ತು ಹೋಗುವುದೂ ಒಟ್ಟೊಟ್ಟಿಗೆ ಮಾಡುತ್ತಿದ್ದೇವು. ಅದೇ ರೀತಿ ಮಾನ್ಯ ಚಂದ್ರಶೇಖರ ಮಾಮನಿಯವರ ವಿಚಾರದಲ್ಲೂ ವಿಶ್ವಾಸ ಇದೆ. ಜವಾಬ್ದಾರಿ ಸ್ಥಾನದಲ್ಲಿರುವಾಗ ಎಲ್ಲಾರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅಧಿಕಾರವನ್ನು ಹಚ್ಚಿಕೊಂಡರೆ ಜವಾಬ್ದಾರಿಯ ನಿರ್ವಹಣೆ ಬಹಳ ಸುಗಮವಾಗುತ್ತದೆ. ಎಲ್ಲವನ್ನೂ ನಾವು ಒಬ್ಬರೇ ನಡೆಸಬೇಕೆಂದು ಪ್ರಯತ್ನ ಪಟ್ಟರೆ ಸಮಸ್ಯೆಗಳು ಅನೇಕ ಆಗುತ್ತವೆ. ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದನ್ನು ನಾನು ಅಪೇಕ್ಷೆ ಪಡುವವನೇ ಹೊರತು ಉಲ್ಬಣ ಮಾಡಿಕೊಳ್ಳುವುದಕ್ಕೆ ಇಷ್ಟ ಇಲ್ಲ. ಮಾನ್ಯ ಚಂದ್ರಶೇಖರ ಮಾಮನಿಯವರ ಸಹಕಾರವನ್ನು ಈ ದಿಸೆಯಲ್ಲಿ ಬಯಸುತ್ತಾ ಅವರನ್ನು ಅಭಿನಂದಿಸಿ, ಇದುವರೆಗೆ ಮಾನ್ಯ ಸದಸ್ಯರು ಮಾಡಿದ ಅಭಿನಂದನೆಗಳಿಗೆ ಅವರು ಉತ್ತರಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಚಂದ್ರಶೇಖರ ಮಾಮನಿ (ಉಪಾಧ್ಯಕ್ಷರು):- ಮಾನ್ಯ ಅಧ್ಯಕ್ಷರೇ, ಈ ಸದನದ ಸಭಾನಾಯಕರೇ, ಮಂತ್ರಿಮಂಡಲದ ಸದಸ್ಯರೆ, ಮಾನ್ಯ ವಿರೋಧ ಪಕ್ಷದ ಸದಸ್ಯರೆ, ಹಾಗೂ ಈಸದನದ ಎಲ್ಲಾ ಗೌರವಾನ್ವಿತ ಸದಸ್ಯರೇ, ಈ ದಿನ ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರೂ ನನ್ನನ್ನು ಸರ್ವಾನುಮತದಿಂದ ಉಪಾಧ್ಯಕ್ಷನ್ನಾಗಿ ಆಯ್ಕೆಮಾಡಿದ್ದಕ್ಕಾಗಿ ನಾನು ಈ ಸದನದ ಎಲ್ಲಾ ಸದಸ್ಯೆರಿಗೂ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಸದನವನ್ನು ಮಾನ್ಯ ಸಭಾಧ್ಯಕ್ಷರ ಮಾರ್ಗದರ್ಶನದಲ್ಲಿ ಒಳ್ಳೆಯ ರೀತಿಯಿಂದ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಸದನದ ಎಲ್ಲಾ ಮಾನ್ಯ ಸದಸ್ಯರ ಸಹಕಾರವೂ ಇದರಲ್ಲಿ ನನಗೆ ಬೇಕಾಗುತ್ತದೆ. ನಾನು ಸಾಧ್ಯವಾದಷ್ಟು ಈ ಸದನದ ಗೌರವವನ್ನು ಕಾಪಾಡುವುದಕ್ಕೆ, ಸದನವನ್ನು ಒಳ್ಳೆಯ ರೀತಿಯಿಂದ ನಡೆಸುವುದಕ್ಕೆ ಎಲ್ಲಾ ಮಾನ್ಯ ಸದಸ್ಯರ ಸಂಪೂರ್ಣ ಸಹಕಾರವನ್ನೂ ತೆಗೆದುಕೊಂಡು ಸದನವನ್ನು ನಡೆಸುತ್ತೇನೆಂಬ ಭರವಸೆಯನ್ನು ಕೊಟ್ಟು ಮತ್ತೊಮ್ಮೆ ಎಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ತುಂಬಾ ಒಳ್ಳೆ ವಾತಾವರಣದಲ್ಲಿ ಮಾನ್ಯ ಉಪಾಧ್ಯಕ್ಷರ ಆಯ್ಕೆಯಾಗಿ ಈ ಮನೆಯಲ್ಲಿ ಎಂದು